7. ಗಮನ ಸೆಳೆಯುವ ಸೂಚನೆ

ವಿಷಯ : ಹಾಸನ ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಜಮೀನನ್ನು ಖಾಸಗಿಯವರು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಬಗ್ಗೆ.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :— ಮಾನ್ಯ ಅಧ್ಯಕ್ಷರೇ, ಹಾಸನ ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಜಮೀನನ್ನು ಖಾಸಗಿಯವರು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಬಗ್ಗೆ ನಾನು ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

+ ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :— ಮಾನ್ಯ ಅಧ್ಯಕ್ಷರೇ, ಹಾಸನ ನಗರದಲ್ಲಿ 1959ರಲ್ಲಿ ಸರ್ವೆ ನಂ. 407, 408, 409, 410, 411, 412, 413, 414, 415, 416 ಮತ್ತು 455ರಲ್ಲಿ ಬರುವ 45 ಎಕರೆ ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯನ್ನಾಗಿ ಸರ್ಕಾರ ಆದೇಶ ಸಂಖ್ಯೆ ಆರ್‌ಡಿಎ5 ಐಲ್‌ವಿಂನ 59 ತಾಪ 6155 ಬೆಂಗಳೂರು ದಿನಾಂಕ 15-10-1959 ರಲ್ಲಿ ಪರಿವರ್ತಿಸಲಾಗಿರುತ್ತದೆ. ಈ ಪೈಕಿ ಭೂ ಸ್ವಾಧೀನಗೊಂಡ 16 ಎಕರೆ 2 ಗುಂಟೆ ಪ್ರದೇಶಕ್ಕೆ ರೂ. 17741-08 ಮೊತ್ತವನ್ನು ಲೋಕೋಪಯೋಗಿ ಇಲಾಖೆಯ ಸರ್ಕಾರಿ ವಸತಿ ಗೃಹಗಳನ್ನು ನಿರ್ಮಾಣದ ಸಲುವಾಗಿ ಲೋಕೋಪಯೋಗಿ ಲೆಕ್ಕ ಶೀರ್ಷಿಕೆಯಿಂದ ಭೂಪರಿಹಾರವಾಗಿ ಮೇಲ್ಕಂಡ ಮೊತ್ತವನ್ನು ಪಾವತಿಸಲಾಗಿರುತ್ತದೆ. ಸ್ವಾಧೀನಗೊಂಡ ಸಮಯದಲ್ಲಿಯೇ ಲೋಕೋಪಯೋಗಿ ಇಲಾಖೆಯಿಂದ ಬೌಂಡರಿ ಕಲ್ಲುಗಳನ್ನು ನೆಟ್ಟು ಕಲ್ಲುಗಳ ಮೇಲ್ಭಾಗದಲ್ಲಿ ಪಿ.ಡಬ್ಲ್ಯೂ.ಡಿ ಎಂದು ಅಕ್ಷರದಲ್ಲಿ ಕೆತ್ತಲಾಗಿದ್ದು, ಈ ಕಲ್ಲುಗಳನ್ನು ಈಗಲೂ ಕಾಣಬಹುದಾಗಿದೆ. ಈ ಪೈಕಿ ಕೆಲವು ಬೌಂಡರಿ ಕಲ್ಲುಗಳು ಅಸ್ತವ್ಯಸ್ತಗೊಂಡಿರುತ್ತವೆ.

ಈ ಪ್ರದೇಶದಲ್ಲಿ ಈಗಾಗಲೇ 1959ನೇ ಸಾಲಿನಿಂದ 1985 ನೇ ಸಾಲಿನವರೆಗೆ ಹಂತಹಂತವಾಗಿ ಲೋಕೋಪಯೋಗಿ ಇಲಾಖೆ ವತಿಯಿಂದ ಒಟ್ಟು 95 ವಸತಿ ಗೃಹಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ಮೇಲ್ಕಂಡ ವಸತಿ ಗೃಹಗಳ ಲೇಔಟ್ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯಿಂದಲೇ ನಿರ್ಮಿಸಲಾಗಿರುತ್ತದೆ. ಹಾಗೂ ಸದರಿ ವಸತಿ ಗೃಹಗಳ ದುರಸ್ತಿ, ನೀರು ಸರಬರಾಜು ದುರಸ್ತಿ, ಒಳಚರಂಡಿ ದುರಸ್ತಿ ವೆಚ್ಚವನ್ನು ಲೋಕೋಪಯೋಗಿ ಇಲಾಖೆಯ ವತಿಯಿಂದ ನಿರ್ವಹಿಸಿಕೊಂಡು ಹೋಗಲಾಗುತ್ತಿದೆ. ಸದರಿ ವಸತಿ ಗೃಹಗಳ ಕಂದಾಯವನ್ನು ನಗರಸಭೆ, ಹಾಸನ ಇವರಿಗೆ ಪ್ರತಿ ಸಾಲಿಗೆ ಪಾವತಿಸಲಾಗುತ್ತಿದೆ.

ಸದರಿ ವಸತಿ ಗೃಹಗಳಿಗೆ ಹೊಂದಿಕೊಂಡಂತೆ ಇರುವ ಸರ್ವೆ ನಂ. 407ರ ನಿವೇಶನದಲ್ಲಿ ಪಿ.ಡಬ್ಲ್ಯೂ.ಡಿ. ಉಗ್ರಾಣ ಕಟ್ಟಡ ನಿರ್ಮಿಸಲಾಗಿದ್ದು ಉಗ್ರಾಣದ ಸುತ್ತ

ಹೊರಗೋಡೆ ನಿರ್ಮಿಸಲಾಗಿರುತ್ತದೆ. ಉಳಿದ ಖಾಲಿ ನಿವೇಶನದಲ್ಲಿ ಲೋಕೋಪಯೋಗಿ ಇಲಾಖೆಯ ಡಾಂಬರ್ ಶೇಖರಣೆ ಗುಂಡಿ ಹಾಗೂ ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗದ ಡಾಂಬರ್ ಶೇಖರಣೆಯ ಓಪನ್ ಯಾರ್ಡ್ ಇರುತ್ತದೆ. ಅಲ್ಲದೆ ಈ ಪ್ರದೇಶದಲ್ಲಿ 48 ಮೀ. 30 ಮೀ ಅಳತೆಯ ನಿವೇಶನವನ್ನು ರಾಷ್ಟ್ರೀಯ ಹೆದ್ದಾರಿ ಉಪವಿಭಾಗ (ಲೋ೧) ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಲೋ.೧. ಯವರ ಮೇಲಧಿಕಾರಿಗಳ ನಿರ್ದೇಶನದ ಮೇರೆಗೆ ನಿವೇಶನವನ್ನು ನೀಡಲಾಗಿದ್ದು, ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗ ಕಚೇರಿ ಕಟ್ಟಡ ನಿರ್ಮಾಣಗೊಂಡು 1991ನೇ ಸಾಲಿನಿಂದ ಕಚೇರಿ ನಿರ್ವಹಿಸಿರುತ್ತದೆ. ಹಾಗೂ ಉಳಿದ ಜಾಗದಲ್ಲಿ ಸರ್ಕಾರಿ ಇಂಜಿನಿಯರುಗಳ ಸೇವಾ ಸಂಘಕ್ಕೆ 30 ಮೀ. 30 ಮೀ ಅಳತೆಯ ನಿವೇಶನವನ್ನು ಸರ್ಕಾರಿ ಆದೇಶ ಸಂಖ್ಯೆ : ಲೋಇ :124 ಬಿಎಂಎಸ್-93 ಬೆಂಗಳೂರು ದಿನಾಂಕ: 25-1-99ರಲ್ಲಿ ನೆಲಬಾಡಿಗೆ ಆಧಾರದ ಮೇಲೆ ಕರ್ನಾಟಕ ಇಂಜಿನಿಯರಿಂಗ್ ಸೇವಾ ಸಂಘದ ಕಟ್ಟಡ ನಿರ್ಮಿಸಲು ಸರ್ಕಾರದ ನಿವೇಶನ ಮಂಜೂರಾತಿ ನೀಡಿದ್ದು ಈ ನಿವೇಶನದಲ್ಲಿ ಸಂಘದ ಕಟ್ಟಡವು ನಿರ್ಮಾಣಗೊಳ್ಳುತ್ತಿರುತ್ತದೆ. ಈ ಸಂಘಕ್ಕೆ ಸರ್ಕಾರಿ ಸೇವೆಯಲ್ಲಿರುವ ಅಭಿಯಂತರರು ಸದಸ್ಯರಾಗಿರುತ್ತಾರೆ. ಉಳಿಕೆ ನಿವೇಶನದ ಪೈಕಿ 1960-61ನೇ ಸಾಲಿನಲ್ಲಿ ಶ್ರೀರಾಮ ದೇವಸ್ಥಾನವನ್ನು ಲೋಕೋಪಯೋಗಿ ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ನೌಕರರು ವಂತಿಕೆ ಮುಖಾಂತರ ಹಣ ಶೇಖರಣೆ ಮಾಡಿ ಈ ದೇವಸ್ಥಾನವನ್ನು ನಿರ್ಮಾಣ ಮಾಡಿದ್ದು, ಈ ದೇವಸ್ಥಾನದ ನಿರ್ವಹಣೆಯನ್ನು ಸರ್ಕಾರಿ ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ನೌಕರ ವರ್ಗದವರೇ ನಿರ್ವಹಿಸಿಕೊಂಡು ಹೋಗುತ್ತಿರುತ್ತಾರೆ. ಇದೇ ರಾಮಮಂದಿರದ ಮುಂಭಾಗದಲ್ಲಿ ನವಗ್ರಹ ದೇವಸ್ಥಾನವನ್ನು 1987-88ನೇ ಸಾಲಿನಲ್ಲಿ ಸರ್ಕಾರಿ ವಸತಿ ಗೃಹಗಳಲ್ಲಿ ವಾಸಿಸುತ್ತಿದ್ದ ಶ್ರೀ ಟಿ.ಕೆ. ವಿಶ್ವನಾಥ್, ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಹಾಸನ, ಇವರು ತಮ್ಮ ಸ್ವಂತ ವೆಚ್ಚದಲ್ಲಿ ನಿರ್ಮಿಸಿಕೊಟ್ಟಿರುತ್ತಾರೆ. ಇದೇ ರಾಮಮಂದಿರದ ಮುಂಭಾಗದಲ್ಲಿರುವ ಸಮುದಾಯ ಭವನದ ಕಟ್ಟಡವನ್ನು ಸರ್ಕಾರಿ ನೌಕರರು ವಂತಿಕೆ ಮೂಲಕ ನಿರ್ಮಿಸುತ್ತಿದ್ದು ಈಗ ಕಟ್ಟಡವು ಛಾವಣಿಮಟ್ಟಕ್ಕೆ ಬಂದಿರುತ್ತದೆ.

ಈ ಮಧ್ಯೆ ಶ್ರೀ ರಾಮಸೇವಾ ಸಮಿತಿ, ಹಾಸನ (ರಿ) ಟ್ರಸ್ಟ್ ಇವರು ಶ್ರೀರಾಮದೇವಸ್ಥಾನ ಮತ್ತು ಇದಕ್ಕೆ ಹೊಂದಿಕೊಂಡಿರುವ ಖಾಲಿ ನಿವೇಶನವನ್ನು 1998ರಲ್ಲಿ ಮೇಲ್ಕಂಡ ಟ್ರಸ್ಟ್‌ನ್ನು ರಚಿಸಿಕೊಂಡು ಕಾನೂನು ಬಾಹಿರವಾಗಿ ಹಾಸನ ನಗರಸಭೆಯಿಂದ ಮಂಜೂರು ಮಾಡಿಸಿಕೊಳ್ಳಲು ಪ್ರಯತ್ನಿಸಿರುವುದನ್ನು ಹಾಸನ ನಗರದ ಸ್ಥಳೀಯ ದಿನಪತ್ರಿಕೆಯಾದ ಪ್ರತಿನಿಧಿಯಲ್ಲಿ ದಿನಾಂಕ: 14-10-2000ರಂದು ನಗರಸಭಾ, ಹಾಸನ, ಇವರು ಪ್ರಕಟಣೆ ಹೊರಡಿಸಿ ಸದರಿ ನಿವೇಶನವನ್ನು ಶ್ರೀರಾಮ ಸೇವಾ ಸಮಿತಿ ಹಾಸನ (ರಿ) ಟ್ರಸ್ಟ್ ಹಾಸನ ಇವರಿಗೆ ವಹಿಸಿಕೊಡಲು ಸಾರ್ವಜನಿಕ ಆಕ್ಷೇಪಣೆ ಕೋರಿರುವುದನ್ನು ತಿಳಿದು ಈ ಭೂಪ್ರದೇಶವು ಲೋಕೋಪಯೋಗಿ ಇಲಾಖೆಗೆ ಸೇರಿದ್ದು ಸರ್ಕಾರಿ ಕಟ್ಟಡಗಳು ಮತ್ತು

ಈ ಇಲಾಖೆಯ ಇತರ ಕಾರ್ಯ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರುವುದರಿಂದ ಈ ನಿವೇಶನವನ್ನು ಖಾಸಗಿ ಸಂಘಸಂಸ್ಥೆಗಳಿಗೆ ಅಥವಾ ವ್ಯಕ್ತಿಗಳಿಗೆ ಮಹಿಸದಂತೆ ಈ ಇಲಾಖೆಯಿಂದ ನಗರಸಭೆ, ಹಾಸನ ಇವರಿಗೆ ಆಕ್ಷೇಪಣೆ ಮಾಡಲಾಗಿರುತ್ತದೆ. ಸದರಿ ಭೂಪ್ರದೇಶದಲ್ಲಿರುವ ದೇವಸ್ಥಾನಗಳಾದ ಶ್ರೀರಾಮದೇವಸ್ಥಾನ, ನವಗ್ರಹ ದೇವಸ್ಥಾನ, ಸ್ಟೋರ್ ಕಟ್ಟಡ ಇತ್ಯಾದಿಗಳನ್ನು ನಿರ್ಮಾಣ ಸಮಯದಿಂದ ಈವರೆಗೆ ಲೋಕೋಪಯೋಗಿ ಇಲಾಖೆಯಿಂದ ನಿರ್ವಹಿಸಿಕೊಂಡು ಹೋಗುತ್ತಿದ್ದು, ಈ ಮಧ್ಯೆ ಮೇಲ್ಕಂಡ ರಾಮಸೇವಾ ಸಮಿತಿ ಹಾಸನ (ರಿ) ಟ್ರಸ್ಟ್, ಹಾಸನ ಇವರಿಗೂ ಮೇಲ್ಕಂಡ ದೇವಸ್ಥಾನಗಳಿಗೂ ಯಾವುದೆ ಸಂಬಂಧವಿರುವುದಿಲ್ಲ. ಅಂದರೆ ಈ ಟ್ರಸ್ಟಿನ ಯಾವುದೇ ಚಟುವಟಿಕೆಗಳೂ ಈ ಪ್ರದೇಶದಲ್ಲಿರುವುದಿಲ್ಲ. ನೋಂದಾಯಿತ ಟ್ರಸ್ಟಿನಲ್ಲಿ ಯಾರೊಬ್ಬ ಸರ್ಕಾರಿ ನೌಕರನೂ ಸದಸ್ಯನಾಗಿರುವುದಿಲ್ಲ.

ಸದರಿ ಲೋಕೋಪಯೋಗಿ ಇಲಾಖೆಯ ಸ್ಥಿರಾಸ್ತಿಯನ್ನು ಹಾಸನ ನಗರಸಭಾ ಆಸ್ತಿಯೆಂದು ಘೋಷಿಸಿಕೊಂಡು ಈ ಆಸ್ತಿಯನ್ನು ಇತರರಿಗೆ ಮಹಿಸಲು ಹುನ್ನಾರ ನಡೆಸಿರುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಇವರು ಅವರ ಕಚೇರಿ ಪತ್ರ ಸಂಖ್ಯೆ: ಜಿಆಆಹಾಶಾ: 2000-01 ದಿನಾಂಕ: 30-10-2000 ರಂದು ಆದೇಶ ಹೊರಡಿಸಿ ಸದರಿ ಆಸ್ತಿಯ ಬಗ್ಗೆ ತನಿಖೆ ಮಾಡಲು ಉಪವಿಭಾಗಾಧಿಕಾರಿಗಳು, ಹಾಸನ ಇವರನ್ನು ನೇಮಿಸಿರುತ್ತಾರೆ. ಅಲ್ಲದೆ ಸದರಿ ಸ್ಥಿರಾಸ್ತಿಯನ್ನು ಪರಭಾರೆ ಮಾಡುವ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದಂತೆ ನಗರಸಭೆ ಹಾಸನ ಇವರಿಗೆ ಆದೇಶಿಸಿರುತ್ತಾರೆ.

ಮೇಲ್ಕಂಡ ಲೋಕೋಪಯೋಗಿ ಇಲಾಖೆಗೆ ಸ್ವಾಧೀನಗೊಂಡ ಭೂ ಪ್ರದೇಶವನ್ನು ಸರ್ವೆ ಮಾಡಿಸಿ ಬೌಂಡರಿಯನ್ನು ಹಾಕಿಸಿಕೊಡಲು ರವಿನ್ಯೂ ಇಲಾಖೆಯವರನ್ನು ಕೋರಲಾಗಿದ್ದು, ಬೌಂಡರಿಯನ್ನು ನಿಗಧಿಪಡಿಸಿಕೊಂಡು ಹೊರಗೋಡೆ ನಿರ್ಮಾಣ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

+ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೇ, ಹಾಸನದಲ್ಲಿ ನಡೆದಿರುವುದು ಒಂದು ವಿಚಿತ್ರ ಘಟನೆಯಾಗಿದೆ. ಆದರೂ ಇದು ನಿಜವಾದ ಸಂಗತಿಯಾಗಿದೆ. ಹಾಸನ ಟೌನ್ ಮಧ್ಯ ಭಾಗದಲ್ಲಿ ಪಿ.ಡಬ್ಲ್ಯೂ.ಡಿ. ಇಲಾಖೆಗೆ ಸೇರಿದ 8-10 ಎಕರೆ ಜಮೀನು ಇದೆ. ಕಳೆದ 40-50 ವರ್ಷಗಳಿಂದ ಅದು ಪಿ.ಡಬ್ಲ್ಯೂ.ಡಿ. ಇಲಾಖೆಯ ಸ್ವಾಧೀನದಲ್ಲಿದೆ. ಅಲ್ಲಿ ಹಳೆಯ ಮೆಷಿನ್ನು, ಟಾರು ಇತ್ಯಾದಿಗಳನ್ನೆಲ್ಲಾ ಸ್ಟಾಕ್ ಮಾಡಿಕೊಳ್ಳುತ್ತಲೇ ಇದ್ದಾರೆ. 1958ನೇ ಇಸವಿಗಿಂತಲೂ ಮುಂದೆ ಅದನ್ನು ಪಿ.ಡಬ್ಲ್ಯೂ.ಡಿ. ಪರವಾಗಿ ರೆವಿನ್ಯೂ ಇಲಾಖೆ ಅಕ್ವೈರ್ ಮಾಡಿ ಕೊಟ್ಟಿದೆ. ಈ ಸ್ಟಾಕ್ ಯಾರ್ಡ್‌ನ ಪಶ್ಚಿಮ ಭಾಗದಲ್ಲಿ ಒಂದು ಶ್ರೀರಾಮ ಮಂದಿರವನ್ನು ಪಿ.ಡಬ್ಲ್ಯೂ.ಡಿ. ಆಫೀಸಿಯಲ್ಸ್ ಮತ್ತು ಭಕ್ತಾದಿಗಳೆಲ್ಲಾ ಸೇರಿ ಕಟ್ಟಿ ಅಲ್ಲಿ ಪೂಜೆಗೆ ವ್ಯವಸ್ಥೆ ಮಾಡಿದ್ದಾರೆ. ದೇವಸ್ಥಾನದ ಹಿಂಭಾಗದಲ್ಲಿ ಚಿಕ್ಕ ಮನೆಯನ್ನು

ಪೂಜಾರಿಗೆಂದು ಕಟ್ಟಿದ್ದಾರೆ. ಇದು ಹೀಗೆಯೇ ನಡೆದುಕೊಂಡು ಹೋಗುತ್ತಿತ್ತು. ಒಂದು ದಿವಸ ಯಾರೋ ದಾರಿಯಲ್ಲಿ ಬರುವವನು ಈ ಮನೆಯನ್ನು ನೋಡಿ ಅದರೊಳಗೆ ಸೇರಿಕೊಂಡ. ದಾರಿಯಲ್ಲಿ ಹೋಗುವವನು ಮಂದಿರದ ಪಕ್ಕದಲ್ಲಿ ಪೂಜಾರಿಗೆಂದು ಸಣ್ಣ ರೂಮ್ ಕಟ್ಟಿದ್ದರಲ್ಲ ಅದರೊಳಗೆ ಆತ ಕ್ಯಾಂಪ್ ಹಾಕಿದ. ಇದಾದಮೇಲೆ ಇಲಾಖೆಯವರು ಯಾರೋ ತಲೆ ಕೆಟ್ಟಿರುವವನು ಅಲ್ಲಿ ಬಂದು ಸೇರಿಕೊಂಡಿದ್ದಾನೆ, ನೋಡೋಣ ಆತ ಅಲ್ಲೇ ಸ್ವಲ್ಪ ದಿವಸ ಇರಲಿ ಎಂದುಕೊಂಡು ಸುಮ್ಮನಾದರು. ನಂತರ ಅವರು ಒಂದು ದಿವಸ ಏಕೆ ಇಲ್ಲಿ ಬಂದು ಸೇರಿಕೊಂಡಿದ್ದೀಯಾ? ಈ ಜಾಗವನ್ನು ಬಿಡು ಎಂದು ಅಲ್ಲಿದ್ದವನನ್ನು ಕೇಳಿದರು. ಆತ ನಾನು ಪೂಜೆ ಮಾಡಬೇಕು, ನಾನು ಪೂಜೆ ಮಾಡುವುದಕ್ಕೆಂದೇ ಇಲ್ಲಿಗೆ ಬಂದಿರುವುದು, ನಾನು ಈ ಸ್ಥಳವನ್ನು ಬಿಡುವುದಿಲ್ಲ ಎಂದು ಹೇಳಿದ. ಇವರು ಇವನಿಗೆ ತಲೆ ಕೆಟ್ಟಿದೆ, ಅದು ಸರಿ ಹೋಗುತ್ತದೆ, ಆಮೇಲೆ ಅವನು ಹೊರಟು ಹೋಗುತ್ತಾನೆ ಎಂದುಕೊಂಡು 6-7 ತಿಂಗಳು ಸುಮ್ಮನಿದ್ದರು. ಆಮೇಲೆ ಮನೆ ಬಿಡಲು ಅವನಿಗೆ ಒತ್ತಾಯ ಮಾಡಿದರು. ಅವನು ಅದರ ವಿರುದ್ಧ ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದ. ಕೋರ್ಟ್ ಯಾವ ಆಧಾರದ ಮೇಲೆ ಆತನಿಗೆ ಸ್ಟೇ ಕೊಟ್ಟಿತೋ ಏನೋ ನನಗೆ ಗೊತ್ತಿಲ್ಲ. ಇವನನ್ನು ಖಾಲಿ ಮಾಡಿಸುವಂತಿಲ್ಲ ಎಂದು ಕೋರ್ಟ್‌ನವರು ಸ್ಟೇ ಆರ್ಡರ್ ಕೊಟ್ಟರು. ಕೋರ್ಟ್ ಸ್ಟೇ ಕೊಟ್ಟ ತಕ್ಷಣ ಅಲ್ಲಿ ವಾಸಿಸುತ್ತಿದ್ದವನು ಈ 8 ಎಕರೆ ಜಮೀನೆಲ್ಲವೂ ತನ್ನದೇ, ಇಲ್ಲಿಗೆ ಯಾರೂ ಬರಕೂಡದು ಎಂದು ಹೇಳುವುದಕ್ಕೆ ಶುರು ಮಾಡಿದ. ಆಗಲೂ ಕೂಡ ಪಿ.ಡಬ್ಲ್ಯೂ.ಡಿ.ಯವರು ಇದನ್ನು ಅಷ್ಟೊಂದು ಸೀರಿಯಸ್ಸಾಗಿ ತೆಗೆದುಕೊಳ್ಳಲಿಲ್ಲ. ಹಾಸನದಲ್ಲಿ ಕೆಲವರು ಜನ ಸೇವಕರು ಇದ್ದಾರೆ. ಜನಸೇವೆ ಮಾಡುವುದಕ್ಕೆ ಅವರಿಗೆ ಬಹಳ ಕಾತುರ ಇದೆ. ಜನಸೇವೆ ಮತ್ತು ದೇಶಸೇವೆ ಮಾಡುವುದಕ್ಕೋಸ್ಕರವೇ ತಮ್ಮ ಜೀವನವನ್ನು ಮುಡಿಪಾಗಿಟ್ಟಿರತಕ್ಕಂಥ 7-8 ಜನಕ್ಕೆ ಈ ವಿಷಯ ಗೊತ್ತಾಯಿತು. ಆಮೇಲೆ ಈ 7-8 ಜನ ದೇವರ ಭಕ್ತರು ಮತ್ತು ಜನಸೇವಕರು ನಾವು ಏಕೆ ಈ ವಿಷಯದಲ್ಲಿ ಮಧ್ಯ ಪ್ರವೇಶ ಮಾಡಬಾರದು ಎಂದು ಯೋಚಿಸಿ ಒಬ್ಬ ಗುರುಗಳನ್ನು ಮುಂದಿಟ್ಟುಕೊಂಡು ಅಲ್ಲಿ ಪೂಜೆಗೆ ಶುರು ಮಾಡಿದರು. ಸ್ವಲ್ಪ ದಿವಸ ಕಳೆದ ಮೇಲೆ ದೇವರ ಪೂಜೆಗೆ ಸಂಬಂಧಪಟ್ಟದ್ದೆಂದು ಒಂದು ಟ್ರಸ್ಟ್ ಮಾಡಿದರು. ಟ್ರಸ್ಟ್ ಮಾಡಿದ ಮೇಲೆ ಅವರವರೇ ಕುಳಿತು ಮಾತನಾಡಿಕೊಂಡು ನಾವು ಜನಸೇವೆ ಏನೋ ಮಾಡುತ್ತೇವೆ, ದೇವರ ಸೇವೆಯನ್ನೂ ಕೂಡ ಮಾಡುತ್ತೇವೆ, ಆದರೆ ಜನಸೇವೆಗೆ ದುಡ್ಡು ಕಾಸು, ಆಸ್ತಿ ಬೇಕಾಗುತ್ತದೆಯಲ್ಲವೇ ಎಂದು ಚರ್ಚಿಸಿದರು. ಅವರಲ್ಲಿ ಯಾರೋ ಒಬ್ಬರು ಪಕ್ಕದಲ್ಲಿ ಯಾರಾದರೂ ಬಡವರು ಇದ್ದರೆ ಅಲ್ಲಿ ಕ್ಯಾಂಪ್ ಹಾಕೋಣ ಎಂದು ಸಜೆಸ್ಟ್ ಮಾಡಿದರಂತೆ. ಆಗ ಬೇರೆಯವರು ಜನಕ್ಕೆ ಈ ವಿಷಯ ಗೊತ್ತಾದರೆ ನಮ್ಮ ಹಲ್ಲು ಉದುರಿಸಿಬಿಡುತ್ತಾರೆ, ಆ ಕೆಲಸ ಮಾಡುವುದು ಬೇಡ ಎಂದರಂತೆ. ಇಲ್ಲೇ ಪಿ.ಡಬ್ಲ್ಯೂ.ಡಿ.ಗೆ ಸೇರಿದ ಜಮೀನು ಇದೆ, ಅಲ್ಲಿ ಯಾರೂ ಕೇಳುವವರಿಲ್ಲ, ಯಾರೂ ಅದನ್ನು ಸೀರಿಯಸ್ಸಾಗಿ

ತೆಗೆದುಕೊಂಡಿಲ್ಲ, ಇದನ್ನೇ ನಮ್ಮದು ಎಂದು ಮಾಡಿಕೊಂಡು ಬಿಡೋಣ ಎಂದು ಅವರು ನಂತರ ನಿರ್ಧರಿಸಿದರು. ಇದರ ಬಗ್ಗೆ ಅವರುಗಳು ಸಣ್ಣದೊಂದು ಮೀಟಿಂಗ್ ಅನ್ನು ತಮ್ಮೊಳಗೇ ಮಾಡಿಕೊಂಡರು. ನಂತರ ಅವರು ಮುನಿಸಿಪಾಲಿಟಿ ಅಧಿಕಾರಿಗಳನ್ನು ಹಿಡಿದು ಅವರು ಮತ್ತು ಇವರು ಸೇರಿಕೊಂಡು ಆ ಪಿ.ಡಬ್ಲ್ಯೂ.ಡಿ. ಜಮೀನನ್ನು ಮುನಿಸಿಪಲ್ ಜಮೀನು ಎಂದು ಖಾತೆ ಬದಲಾಯಿಸಿದರು. ಮುನಿಸಿಪಾಲಿಟಿಯವರು ಮತ್ತು ಜನಸೇವಕರು ಇದರಲ್ಲಿ ಶಾಮೀಲಾದರು. ಇದಾದ ನಂತರ ಸ್ವಲ್ಪ ದಿವಸ ಸುಮ್ಮನೆ ಇದ್ದರು. ಈ ಪಿ.ಡಬ್ಲ್ಯೂ.ಡಿ. ಯವರು ಆ ಜಾಗಕ್ಕೆ ಹೋದಾಗ ಅವರು, ಈ ಜಾಗದ ಒಳಗೇನಾದರೂ ನೀವು ಕಾಲಿಟ್ಟರೆ ನಿಮ್ಮ ಗತಿ ನೆಟ್ಟಗೆ ಮಾಡುತ್ತೇವೆ ಎಂದು ಹೆದರಿಸಿದರು. ಆಮೇಲೆ ಇಂಜಿನಿಯರ್‌ಗಳು ಇತ್ಯಾದಿ ಅಧಿಕಾರಿಗಳನ್ನೆಲ್ಲಾ ಅವರು ದೊಣ್ಣೆ ತೆಗೆದುಕೊಂಡು ಓಡಿಸಿಕೊಂಡು ಬರುವುದಕ್ಕೆ ಶುರು ಮಾಡಿದರು. ಮುಂದೆ ಏನು ಮಾಡುವುದು ಎಂದು ಇಲಾಖೆಯವರು ಫಜೀತಿ ಪಡುತ್ತಿದ್ದರು. ಅದು ನನ್ನ ಗಮನಕ್ಕೂ ಬಂದಿತು. ಮಾನ್ಯ ಶ್ರೀಕಂಠಯ್ಯನವರೂ ಕೂಡ ಅಲ್ಲಿಗೆ ಬಂದಿದ್ದರು. ನಾನು ಆ ವಿಷಯವನ್ನು ಅವರ ಗಮನಕ್ಕೆ ತಂದೆ. ಅದು ಸುಮಾರು 15 ಕೋಟಿ ರೂಪಾಯಿ ಬೆಲೆಯ ಸರ್ಕಾರಿ ಜಮೀನಾಗಿದೆ. ಆಮೇಲೆ ಇದರ ಬಗ್ಗೆ ಪೊಲೀಸರಿಗೆ ಇಂಜಿನಿಯರುಗಳು ಮತ್ತು ಇತರರು ಕಂಪ್ಲೇಂಟ್ ಕೊಟ್ಟರು. ಪೊಲೀಸರು ಜಮೀನಿನ ಮಾಲೀಕತ್ವದ ಬಗ್ಗೆ ದಾಖಲೆ ಕೊಡಿ ಎಂದರು. ಈ ಜಮೀನಿಗೆ ಸಂಬಂಧಪಟ್ಟ ದಾಖಲೆಯನ್ನು ಹುಡುಕಲು ಹೊರಟರೆ ಆ ದಾಖಲೆಯನ್ನೇ ಪತ್ತೆ ಇಲ್ಲದಂತೆ ಮಾಡಲಾಗಿದೆ. ಮುನಿಸಿಪಾಲಿಟಿಯಲ್ಲಿ ಪಿ.ಡಬ್ಲ್ಯೂ.ಡಿ. ಆಸ್ತಿಯನ್ನು ಮುನಿಸಿಪಾಲಿಟಿಯದು ಎಂದು ಬರೆಸಿದರು. ಖಾತೆಗೆ ಚೇಂಜ್ ಮಾಡಿಸುವುದಕ್ಕೂ ಸಹಾ ವ್ಯವಸ್ಥೆ ಮಾಡಿದ್ದರು. ಇಂಜಿನಿಯರುಗಳು ಇಲಾಖೆಯಲ್ಲಿ ಆಸ್ತಿಯನ್ನು ಅತಿಕ್ರಮಣ ಮಾಡಿರುವುದಲ್ಲದೇ ನಮಗೆ ಹೊಡೆಯಲು ಬರುತ್ತಾರೆ ಎಂದು ಇವರ ಮೇಲೆ ಕಂಪ್ಲೇಂಟ್ ಅನ್ನು ಪೊಲೀಸರಿಗೆ ಕೊಟ್ಟಾಗ ಪೊಲೀಸರು ಆ ಬಗ್ಗೆ ದಾಖಲೆಯನ್ನು ಕೊಡಿ ಎಂದು ಕೇಳಿದರು. ಆ ದಾಖಲೆಯನ್ನು ಹುಡುಕುತ್ತಲೇ ಇದ್ದಾರೆ. ಆದರೆ ಆ ದಾಖಲೆ ಅಲ್ಲಿ ಇಲ್ಲ. ಎಲ್ಲಾ ಇದರಲ್ಲಿ ಶಾಮೀಲಾಗಿ ದಾಖಲೆ ಇಲ್ಲದಂತೆ ಮಾಡಿದ್ದಾರೆ. ಸರ್ಕಾರಕ್ಕೆ ಸೇರಿದಂತಹ ಆಸ್ತಿಯನ್ನು ಈ ರೀತಿ ಕಬಳಿಸಿಕೊಂಡು ಯಾರೋ ಯಾರೋ ತಮ್ಮ ಕೈವಶ ಮಾಡಿಕೊಂಡರೆ ಹೇಗೆ? ನಾಳೆ ದಿವಸ ಯಾರಾದರೂ ಸರಿಯಾದ ದಡೂತಿಯಾದ ವ್ಯಕ್ತಿ ವಿಧಾನಸೌಧಕ್ಕೆ ಬಂದು ಕ್ಯಾಂಪ್ ಹಾಕಿ ಇದು ನನ್ನದೇ ಎಂದರೆ ಏನು ಮಾಡುತ್ತೀರಿ? ಇನ್ಯಾವುದೇ ಸರ್ಕಾರಿ ಆಸ್ತಿಗೂ ಹೀಗೆ ಮಾಡಬಹುದು. ಇಷ್ಟು ರಾಜಾರೋಷವಾಗಿ ಸರ್ಕಾರಕ್ಕೆ ಸೇರಿದ ಆಸ್ತಿಯನ್ನು ನನ್ನದು ಎಂದು ಟ್ರಸ್ಟ್ ಮಾಡಿಕೊಂಡು, ರೆಕಾರ್ಡ್‌ನಲ್ಲಿ ಎಲ್ಲಾ ಚೇಂಜ್ ಮಾಡಿಸಿ, ನಮ್ಮದು ಎಂದು ಕ್ಯಾಂಪ್ ಹಾಕುವ ಮಟ್ಟಕ್ಕೆ ಹೋಗಿದ್ದಾರೆ ಎಂದರೆ, ಇದು ಲಘುವಾಗಿ ತೆಗೆದುಕೊಳ್ಳತಕ್ಕಂಥ ಪ್ರಶ್ನೆಯಲ್ಲ. ಈಗಲೂ ನಾಲ್ಕಾರು ಇಂತಹ ಸ್ಟೇಟುಗಳು ಹಾಸನದಲ್ಲಿವೆ. ಇದನ್ನು ಉದಾಹರಣೆಯಾಗಿ ಇಟ್ಟುಕೊಂಡು ಬೇರೆ ಬೇರೆ ಸ್ವಾಮಿಗಳವರು

ಸರ್ಕಾರದ ಜಾಗದಲ್ಲಿ ಕ್ಯಾಂಪ್ ಹಾಕಿಬಿಟ್ಟರೆ ಗತಿಯೇನು? ಮಾನ್ಯ ಶ್ರೀಕಂಠಯ್ಯನವರು ಡೆಪ್ಯುಟಿ ರಿಜಿಸ್ಟ್ರಾರ್‌ರವರನ್ನು ಕರೆಸಿ, ಅತಿಕ್ರಮಣ ಮಾಡಿರುವವರನ್ನು ಒದ್ದು ಓಡಿಸಿ ಎಂದು ಆದೇಶ ಕೂಡ ಕೊಟ್ಟಿದ್ದರು. ಮಾನ್ಯ ಮಂತ್ರಿಗಳು ಏನೋ ತಮ್ಮ ಭಾಷೆಯಲ್ಲಿ ಅಧಿಕಾರಿಗಳಿಗೆ ಹುಕುಂ ಕೊಟ್ಟು ಬಂದಿದ್ದರು. ಆದರೆ ರೆಕಾರ್ಡ್ ಅಲ್ಲಿ ಪತ್ತೇ ಇಲ್ಲ. ಪೊಲೀಸ್‌ನವರು ಸಂಬಂಧಪಟ್ಟ ರೆಕಾರ್ಡ್ ಕೊಡಿ ಎನ್ನುತ್ತಾರೆ. ಆ ರೆಕಾರ್ಡ್ ಅನ್ನು ಹುಡುಕಿಸುತ್ತಿದ್ದಾರೆ. ಆದರೆ, ಅದು ಇನ್ನೂ ಕೂಡ ಸಿಕ್ಕಿಲ್ಲ. ಈ ಸರ್ಕಾರಿ ಆಸ್ತಿಯನ್ನು ತಕ್ಷಣ ಸ್ವಾಧೀನಕ್ಕೆ ತೆಗೆದುಕೊಂಡು ಬೌಂಡರಿ ಫಿಕ್ಸ್ ಮಾಡಿ ಇನ್ಯಾರೂ ಜನಸೇವಕರು ಬರದಂತೆ ಬಂದೋಬಸ್ತು ಮಾಡುವುದಕ್ಕೆ ಸಾಧ್ಯವೇ? ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ. ಮಾನ್ಯ ಸಚಿವರು ಇದನ್ನು ಎಷ್ಟು ದಿವಸಗಳಲ್ಲಿ ಮಾಡುತ್ತಾರೆ? ಮಾನ್ಯ ಸಚಿವರಿಗೆ ಆ ಶಕ್ತಿ ಇದೆಯೇ? ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಧರ್ಮಸಿಂಗ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಹನುಮೇಗೌಡರು ಇದೇ ಮೊದಲ ಬಾರಿಗೆ ಶಾಸನಸಭಾ ಸದಸ್ಯರಾಗಿಲ್ಲ. ಅವರು ಬಹಳ ವರ್ಷಗಳಿಂದಲೂ ಕೂಡ ಈ ಶಾಸನಸಭೆಯಲ್ಲಿದ್ದಾರೆ. ಹಾಸನ ನಗರದಲ್ಲಿ ಅಗಿರತಕ್ಕ ಪಿ.ಡಬ್ಲ್ಯೂ.ಡಿ. ಜಮೀನಿನ ಅತಿಕ್ರಮಣದ ಬಗ್ಗೆ ಇಲ್ಲಿ ಪ್ರಸ್ತಾಪಿಸಿದ್ದಾರೆ. ಅದರ ಬಗ್ಗೆ ನಾನು ವಿವರವಾಗಿ ಉತ್ತರದಲ್ಲಿ ಹೇಳಿದ್ದೇನೆ. ಇದು 61 ವರ್ಷಗಳ ಹಿಂದಿನ ಕಥೆ. 1940ರಲ್ಲಿ 45 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದರಲ್ಲಿ 16 ಎಕರೆ ಜಮೀನನ್ನು ಕನ್‌ವರ್ಟ್ ಮಾಡಲಾಗಿತ್ತು. ಕನ್‌ವರ್ಟ್ ಮಾಡಿ ಮೊನ್ನೆ ನಗರಸಭೆಯಿಂದ ಇದರ ಬಗ್ಗೆ ಪ್ರಕಟಣೆ ಹೊರಡಿಸಿದ್ದಾರೆ. ಈ 8 ಎಕರೆ ಜಮೀನಿನಲ್ಲಿ ದೇವಸ್ಥಾನ ಕಟ್ಟಿದ್ದಾರೆ, ಹೊರಗಡೆಯವನು ಬಂದಿದ್ದಾನೆ, ಪೂಜಾರಿ ಇದ್ದಾನೆ ಎಂದು ಮಾನ್ಯ ಸದಸ್ಯರು ಏನೆಲ್ಲಾ ಹೇಳಿದರು ಅದು ಸತ್ಯಕ್ಕೆ ದೂರವಾದುದಲ್ಲ. ಮಾನ್ಯ ಸದಸ್ಯರು ಸತ್ಯ ಸಂಗತಿಯನ್ನೇ ಹೇಳಿದ್ದಾರೆ. ಅಲ್ಲಿಯ ಪಿ.ಡಬ್ಲ್ಯೂ.ಡಿ. ಜಮೀನನ್ನು ಕಾಪಾಡಿಕೊಳ್ಳತಕ್ಕಂಥ ಶಕ್ತಿ ನಮಗೆ ಇದೆ. ಮಾನ್ಯ ಸದಸ್ಯರು ಅನೇಕ ವರ್ಷಗಳಿಂದ ಶಾಸನಸಭೆಯಲ್ಲಿದ್ದಾರೆ. ಹಿಂದೆಲ್ಲಾ ಈ ವಿಚಾರ ಏಕೆ ಪ್ರಸ್ತಾಪ ಆಗಲಿಲ್ಲವೋ ಗೊತ್ತಿಲ್ಲ. ಅಂತೂ ಈ ವಿಷಯ ಇವತ್ತು ಪ್ರಸ್ತಾವವಾಗಿದೆ. ಯಾವಾಗ ನಗರಸಭೆಯವರು ಇದು ತಮ್ಮ ತಮ್ಮ ಜಮೀನು ಎಂದು ಪ್ರಕಟಣೆಯೊಂದನ್ನು ಹೊರಡಿಸಿದರೋ ಆಗ ನಮ್ಮ ಇಲಾಖೆ ಅದರ ಬಗ್ಗೆ ಗಂಭೀರವಾದ ಆಕ್ಷೇಪಣೆಯನ್ನು ಡಿ.ಸಿ.ಯವರಿಗೆ ಸಲ್ಲಿಸಿತು. ಡಿ.ಸಿ.ಯವರು ಇದರ ಬಗ್ಗೆ ವಿಚಾರಿಸಲು ಅಸಿಸ್ಟೆಂಟ್ ಕಮಿಷನರ್ ಅವರನ್ನು ಎನ್‌ಕ್ವೈರಿ ಆಫೀಸರ್ ಎಂದು ನೇಮಕ ಮಾಡಿದ್ದಾರೆ. ನಮ್ಮ ಇಲಾಖೆ ಬೇರೆಯವರಿಗೆ ಈ ಜಮೀನನ್ನು ಬಿಟ್ಟು ಕೊಡುವುದಿಲ್ಲ. ಇದು ಲೋಕೋಪಯೋಗಿ ಇಲಾಖೆಗೇ ಸೇರಿದ ಜಮೀನಾಗಿದೆ. ಯಾರಾದರೂ ಕೂಡ ಈ ಜಮೀನನ್ನು ಕಬಳಿಸತಕ್ಕಂಥ ಪ್ರಯತ್ನ ನಡೆಸಿದಲ್ಲಿ ಸರ್ಕಾರ ಅದನ್ನು ಸಂರಕ್ಷಣೆ ಮಾಡಲು ಬೇಕಾದ ಕ್ರಮ ತೆಗೆದುಕೊಳ್ಳುತ್ತದೆ. ಮಾನ್ಯ ಸದಸ್ಯರ ಅನುಕೂಲಕ್ಕೆ ಮೇರೆಗೆ ನಾವು ಸರಿಯಾದ ಕ್ರಮದಲ್ಲಿ ನಡೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎನ್.ಹೆಚ್. ಪುಟ್ಟರಂಗನಾಥ್ :— ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ರೆಕಾರ್ಡ್‌ಗಳು ಆಫೀಸಿನಲ್ಲಿ ಇಲ್ಲದಂತೆ ಮಾಡಲಾಗಿದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಸರಿಯಾದ ಶಿಕ್ಷೆಗೆ ಮಾನ್ಯ ಸಚಿವರು ಒಳಪಡಿಸಲಿ. ಆಗ ಎಲ್ಲಾ ರೆಕಾರ್ಡ್‌ಗಳೂ ಕೂಡ ಹೊರಗೆ ಬರುತ್ತವೆ.

ಶ್ರೀ ಧರ್ಮಸಿಂಗ್ :— ಈಗಾಗಲೇ ಇದರ ಬಗ್ಗೆ ಎನ್‌ಕ್ವೈರಿ ಆಫೀಸರ್ ನೇಮಕ ಮಾಡಲಾಗಿದೆ. ಅವರು ಇದರ ಬಗ್ಗೆ ವಿವರವಾದ ವರದಿ ನೀಡಲಿದ್ದು, ಅದರ ಮೇಲೆ ಇಲಾಖೆ ಕ್ರಮ ತೆಗೆದುಕೊಳ್ಳುತ್ತದೆ.

3.50 ಪಿ.ಎಂ.

(ಅ) ಚಾಮರಾಜ ನಗರ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 1999-2001ನೇ ಸಾಲಿನಲ್ಲಿ ಅನುಮತಿ ಇಲ್ಲದೆ ಹಾಗೂ ಕಾನೂನು ಉಲ್ಲಂಘನೆ ಮಾಡಿ ಪೀಠೋಪಕರಣಗಳನ್ನು ಖರೀದಿ ಮಾಡಿರುವ ಬಗ್ಗೆ.

ಶ್ರೀ ಎ.ಆರ್. ಕೃಷ್ಣ ಮೂರ್ತಿ (ಸಂತೇಮಾರಹಳ್ಳಿ) :— ಮಾನ್ಯ ಅಧ್ಯಕ್ಷರೇ, ಚಾಮರಾಜನಗರ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 1999-2001ನೇ ಸಾಲಿನಲ್ಲಿ ಅನುಮತಿ ಇಲ್ಲದೆ ಹಾಗೂ ಕಾನೂನು ಉಲ್ಲಂಘನೆ ಮಾಡಿ ಪೀಠೋಪಕರಣಗಳನ್ನು ಖರೀದಿ ಮಾಡಿರುವ ಬಗ್ಗೆ ಉನ್ನತ ಶಿಕ್ಷಣ ವಿಜ್ಞಾನ ಹಾಗೂ ತಂತ್ರಜ್ಞಾನ ರಾಜ್ಯ ಸಚಿವರ ಗಮನ ಸೆಳೆಯುತ್ತೇವೆ.

ಶ್ರೀ ಹೆಚ್. ವಿಶ್ವನಾಥ್ (ಉನ್ನತ ಶಿಕ್ಷಣ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು) :— ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಜಿಲ್ಲಾ ಪಂಚಾಯಿತಿಯಲ್ಲಿ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಪೀಠೋಪಕರಣಗಳ ಖರೀದಿಯಲ್ಲಿ ಸುಮಾರು ಒಂದು ಕೋಟಿ ರೂಪಾಯಿಗೂ ಮೀರಿ ಅವ್ಯವಹಾರವಾಗಿದೆ ಎಂದು ಮಾನ್ಯ ಸದಸ್ಯರು ಸದನದ ಗಮನ ಸೆಳೆದಿದ್ದಾರೆ, ಅದು ಮೇಲ್ನೋಟಕ್ಕೆ ಹೌದು ಎಂದು ನನಗೂ ವಿಶ್ವಾಸಕ್ಕೆ ಬಂದಿದೆ. ಈ ಮಧ್ಯೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಏಳು ಜನ ಸದಸ್ಯರುಗಳನ್ನು ಒಳಗೊಂಡ ಒಂದು ಫ್ಯಾಕ್ಟ್ ಫೈಂಡಿಂಗ್ ಸಮಿತಿಯನ್ನು ಕೂಡ ಮಾಡಿದ್ದೇವೆ. ಆದರೂ ಕೂಡ ಇದರಲ್ಲಿ ಬರೀ ಡಿಡಿಪಿಯವರ ಕೈಯಲ್ಲಿ ಈ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇದಕ್ಕೆ ಹೊಂದಿಕೊಂಡು ಜಿಲ್ಲಾ ಪಂಚಾಯಿತಿಯ ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಮತ್ತು ಇದರಲ್ಲಿ ಅವರ ಅಕೌಂಟ್ಸ್ ಆಫೀಸರ್ ಕೂಡ ಸೇರಿದ್ದಾರೆಂದು ನನಗೆ ಗೊತ್ತಿದೆ, ಅವರು ಮತ್ತು ಟಿಡಿಪಿ ಆ ಮೂರು ಜನರನ್ನು ಡಿಪಿಎಆರ್ ಜೊತೆ ಸಂಪರ್ಕ ಮಾಡಿ ಅಮಾನತ್ತಿನಲ್ಲಿ ಇಡುವುದರ ಜೊತೆಗೆ ಅಡಿಷನಲ್ ಚೀಫ್ ಸೆಕ್ರೆಟರಿಯವರ